ಅಸಲು ದಾವೆ ನಂ.58/2021

ಡಿಡಬ್ಲೂಃ 1– Lavanya D/o Pruthvi Mannan

ದಿನಾಂಕಃ 21/07/2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲು ವಾದಿ ಪರವಾಗಿ ಶ್ರೀ ಸಿ.ಎಸ್.ಎಸ್ ವಕೀಲರಿಂದ**

6. ನಾನು ಪ್ರತಿವಾದಿಯ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ ಎಂದರ ಸರಿ. ದಾವಾ ಸ್ವತ್ತುಗಳನ್ನು ಪ್ರತಿವಾದಿಯು ನನ್ನ ಮದುವೆ ಆದ ನಂತರ ಖರೀದಿಸಿರುತ್ತಾರೆ ಎಂದರೆ ಸರಿ. ಅವುಗಳನ್ನು ಖರೀದಿಸುವಾಗ ಅವುಗಳಲ್ಲಿ ಅಡಿಕೆ ತೋಟ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯ ಕ್ರಯ ಪತ್ರಗಳನ್ನು ನೋಡಿರುತ್ತೇನೆ. ಈಗ ನನಗೆ ತೋರಿಸಿದ ನಿಡಿ.11 ಮತ್ತು 12 ದಾಖಲೆಗಳು ಸದರಿ ಪ್ರತಿವಾದಿಯ ಕ್ರಯ ಪತ್ರಗಳು ಆಗಿರುತ್ತವೆ ಮತ್ತು ಅದರಲ್ಲಿ ಸ್ವತ್ತುಗಳನ್ನು ತರಿ ಜಮೀನು ಎಂದು ನಮೂದಿಸಲಾಗಿರುತ್ತದ ಎಂದರೆ ನನಗೆ ಕನ್ನಡ ಓದಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಸ್ವತ್ತುಗಳನ್ನು ಖರೀದಿಸಿದ ನಂತರ ತಕ್ಷಣ ನಾನು ಅವುಗಳನ್ನು ನೋಡಿರುತ್ತೇನೆ. ಆಗ ಸದರಿ ಸ್ವತ್ತುಗಳಲ್ಲಿ ಅಡಿಕೆ ಗಿಡಗಳು ಇರಲಿಲ್ಲ ಎಂದರೆ ಸಾಕ್ಷಿಯು ಸ್ವತ್ತುಗಳ ಸ್ವಲ್ಪ ಭಾಗದಲ್ಲಿ ಅಡಿಕೆ ಗಿಡಗಳನ್ನು ನೆಡಲಾಗಿತ್ತು ಮತ್ತು ಸ್ವಲ್ಪ ಭಾಗ ಖಾಲಿ ಇತ್ತು ಎಂದು ನುಡಿಯುತ್ತಾರೆ. ಈ ವಿಚಾರ ನಿಜವಾಗಿರುತ್ತದೆ ಎಂದು ತೋರಿಸಲು ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

7. ಅದೇ ರೀತಿ ದಾವಾ ಸ್ವತ್ತುಗಳನ್ನು ಪ್ರತಿವಾದಿ ಖರೀದಿಸುವಾಗ ನಾನು ಮತ್ತು ನನ್ನ ಗಂಡನಾದ ವಾದಿಯು ಅನ್ಯೋನ್ಯವಾಗಿದ್ದೆವು ಎಂದರೆ ಸರಿ ಆದರೆ ನಂತರ ನಮ್ಮ ಮಧ್ಯೆ ಜಗಳ ಪ್ರಾರಂಭವಾಗಿರುತ್ತದೆ. ನನಗೆ 2012 ರಲ್ಲಿ ಮಗ ಜನಿಸಿರುತ್ತಾನೆ. ದಾವಾ ಸ್ವತ್ತುಗಳನ್ನು ಖರೀದಿಸಿದಾಗ ಅವುಗಳನ್ನು ವಾದಿಯೇ ನೋಡಿಕೊಳ್ಳತಕ್ಕದ್ದು ಎಂದು ವಾದಿ ಮತ್ತು ಪ್ರತಿವಾದಿ ಮಧ್ಯೆ ಒಪ್ಪಂದ ಆಗಿತ್ತು ಎಂದರೆ ಸರಿಯಲ್ಲ. ಸದರಿ ಒಪ್ಪಂದದ ಮೇರೆಗೆ ವಾದಿಯೇ ದಾವಾ ಸ್ವತ್ತುಗಳನ್ನು ಖರೀದಿಸಿದ ನಂತರ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಅದೇ ರೀತಿ ಸ್ವತ್ತುಗಳನ್ನು ಖರೀದಿಸಿದ ನಂತರ ವಾದಿಯೇ ಅವುಗಳಲ್ಲಿ ಅಡಿಕೆ ಗಿಡಗಳನ್ನು ನೆಟ್ಟು ತೋಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸ್ವತ್ತುಗಳಲ್ಲಿ ಪೌಲ್ಟ್ರಿ ಫಾರ್ಮ್ ಇತ್ತು ಎಂದರೆ ಸರಿ. ಅದನ್ನು ಸಹ ವಾದಿಯೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಯ ಮಧ್ಯೆ ದಾವಾ ಸ್ವತ್ತುಗಳನ್ನು ನೋಡಿಕೊಳ್ಳುವ ಒಪ್ಪಂದ ಆಗಿದ್ದ ಕಾರಣಕ್ಕಾಗಿಯೇ ವಾದಿ ಮತ್ತು ಅವರ ಕ್ರಯ ಪತ್ರಗಳಿಗೆ ಸಾಕ್ಷಿದಾರರು ಎಂದು ಸಹಿ ಹಾಕಿರುತ್ತಾರೆ ಎಂದರೆ ಸರಿಯಲ್ಲ ಆದರೆ

ಅವರು ಪ್ರತಿವಾದಿಗೆ ಹತ್ತಿರದ ಸಂಬಂಧಿಕರು ಆಗಿದ್ದರಿಂದ ಸಹಿ ಹಾಕಿರುತ್ತಾರೆ ಎಂದು ನುಡಿಯುತ್ತಾರೆ.

8. ದಾವಾ ಸ್ವತ್ತುಗಳನ್ನು 2012 ಖರೀದಿಸಿದ ನಂತರ 2014 ರಲ್ಲಿ ಅವುಗಳ ಮೇಲೆ ಎಂಸಿ ಹಳ್ಳಿಯ ಕರ್ನಾಟಕ ಗ್ರಾಮೀಣ ಬ್ಯಾಂಕಿನಿಂದ ಸಾಲ ಪಡೆಯಲಾಗಿತ್ತು ಎಂದರೆ ಸರಿ. ಸದರಿ ಸಾಲವನ್ನು ವಾದಿ ಮತ್ತು ಪ್ರತಿವಾದಿ ಜಂಟಿಯಾಗಿ ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ ಅದರೆ ಕೇವಲ ಪ್ರತಿವಾದಿ ಪಡೆದುಕೊಂಡಿದ್ದು ಅದಕ್ಕೆ ವಾದಿ ಸಾಕ್ಷಿದಾರ ಮಾತ್ರ ಆಗಿದ್ದರು. ಸದರಿ ಸಾಲವನ್ನು ನೀಡಲು ಬ್ಯಾಂಕಿನವರು ನನ್ನ, ನನ್ನ ಸಹೋದರಿಯಾದ ಮೋನಿಶಾ ಮತ್ತು ಸಹೋದರನಾದ ಕಾಮೇಶರವರ ಸಹಿಗಳನ್ನು ಸಹ ಕೇಳಿದ್ದರು ಎಂದರೆ ಸರಿ. ಸದರಿ ಸಾಲವನ್ನು ಮರು ಪಾವತಿ ಮಾಡದೇ ಇದುದ್ದಕ್ಕಾಗಿ ಬ್ಯಾಂಕಿನವರು ನಮ್ಮೆಲ್ಲರಿಗೆ ನೋಟಿಸ್ ಕೊಟ್ಟಿದ್ದರು ಎಂದರೆ ಸರಿ . ಸದರಿ ನೋಟಿಸನ್ನು ಈ ದಾವೆ ದಾಖಲಿಸಿದ ನಂತರ ನೀಡಲಾಗಿತ್ತು ಎಂದರೆ ನನಗೆ ನೆನಪಿರುವುದಿಲ್ಲ. ಸದರಿ ನೋಟಿಸನ್ನು ನಾನು, ಪ್ರತಿವಾದಿ ಮತ್ತು ನನ್ನ ಸಹೋದರ, ಸಹೋದರಿಯವರು ಕಾಟಪಾಡಿ ವಿಳಾಸದಲ್ಲಿ ಸ್ವೀಕರಿಸಿರುತ್ತೇವೆ ಎಂದರೆ ಸರಿ. ಈಗ ನನಗೆ ತೋರಿಸಿದ ದಾಖಲೆಯು ಸದರಿ ನೋಟಿಸಿನ ನಕಲು ಆಗಿರುತ್ತದೆ ಎಂದರೆ ಸರಿ. ಅದನ್ನು ಈಗ **ನಿಪಿ.16** ಎಂದು ಗುರುತಿಸಲಾಯಿತು. ಸದರಿ ನೋಟಿಸಿನಲ್ಲಿ ವಾದಿಯ ಹೆಸರು ಸಹ ಇರುತ್ತದೆ ಎಂದರೆ ಸರಿ.

9. ದಾವಾ ಸ್ವತ್ತುಗಳನ್ನು ಪ್ರತಿವಾದಿ ಖರೀದಿಸಿದ ನಂತರ ವಾದಿಯು ನೋಡಿಕೊಳ್ಳುತ್ತಿದ್ದರೂ ಸಹ ಅವರು ನೋಡಿಕೊಳ್ಳುತ್ತಿರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಕುಟುಂಬಕ್ಕೆ ಬೇರೆ ಕೃಷಿ ಭೂಮಿ ಇರುವುದಿಲ್ಲ ಎಂದರೆ ಸರಿಯಲ್ಲ. ಈ ದಾವೆಯನ್ನು ದಾಖಲಿಸುವುದಕ್ಕೂ ಮುಂಚೆ ವಾದಿಯು ಪ್ರತಿವಾದಿಯ ವಿರುದ್ಧ ಈ ದಾವಾ ಸ್ವತ್ತುಗಳ ಶಾಶ್ವತ ನಿರ್ಭಂದಕಾಜ್ಞೆ ಕೋರಿ ಅಸಲು ದಾವೆ ನಂಬರ 238/2020 ವನ್ನು ದಾಖಲಿಸಿದ್ದರು ಎಂದರೆ ಸರಿ ಆದರೆ ಅವರ ವಿರುದ್ಧ ನಾನು ಕಿರುಕುಳದ ವಿಚಾರವಾಗಿ ಪೊಲೀಸರಿಗೆ ದೂರು ಸಲ್ಲಿಸಿದ ನಂತರ ಅವರು ದಾವೆ ದಾಖಲಿಸಿದ್ದರು ಎಂದು ನುಡಿಯುತ್ತಾರೆ. ನಾನು ವಾದಿಯ ಕಿರುಕುಳದ ವಿಚಾರವಾಗಿ ಪೊಲೀಸರಿಗೆ ದೂರು ಸಲ್ಲಿಸಿದ ನಂತರ ಅವರು ಸದರಿ ದಾವೆ ದಾಖಲಿಸಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಹೊರತು ಅದನ್ನು ನಾನು ದೂರು ಸಲ್ಲಿಸುವುದಕ್ಕೂ ಮುಂಚೆ

ದಾಖಲಿಸಿದ್ದರು ಎಂದರೆ ಸರಿಯಲ್ಲ. ಸದರಿ ದಾವೆ ವಿಚಾರಣೆ ಹಂತದಲ್ಲಿರುವಾಗ ಪ್ರತಿವಾದಿಯು ದಾವಾ ಸ್ವತ್ತುಗಳನ್ನು ನಿಪಿ.5 ಮತ್ತು 6 ದಾಖಲೆಗಳ ಅಡಿಯಲ್ಲಿ ಮಾರಾಟ ಮಾಡಲು ಪ್ರಯತ್ನಿಸಿದ್ದರು ಎಂದರೆ ಸರಿ ಆದರೆ ದಾವೆಯಲ್ಲಿ ಮಧ್ಯಂತರ ನಿರ್ಭಂದಕಾಜ್ಞೆ ಆದೇಶ ರದ್ದಾದ ನಂತರ ಪ್ರಯತ್ನಿಸಿದ್ದರು ಎಂದು ನುಡಿಯುತ್ತಾರೆ.

10. ದಾವಾ ಸ್ವತ್ತುಗಳನ್ನು ಪ್ರತಿವಾದಿಯು ವಾದಿಗೆ ದಿನಾಂಕ 01-06-2013 ರಂದು ರೂ.8 ಲಕ್ಷಗಳಿಗೆ ಮೌಖಿಕವಾಗಿ ಮಾರಾಟ ಮಾಡಲು ಒಪ್ಪಿ ಅದೇ ದಿನ ಮುಂಗಡ ಹಣವಾಗಿ ರೂ.4 ಲಕ್ಷಗಳನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ವಾದಿಯು ಪ್ರತಿವಾದಿಗೆ ಬಾಕಿ ಕ್ರಯದ ಪ್ರತಿಫಲವಾದ ರೂ.4 ಲಕ್ಷಗಳನ್ನು ದಿನಾಂಕ 15-10-2013 ರಂದು ಪಾವತಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಎರಡು ದಿನಾಂಕದಂದು ನಾನು ಮತ್ತು ವಾದಿಯು ಅನ್ಯೋನ್ಯವಾಗಿದ್ದೆವು ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿಯೇ ಪ್ರತಿವಾದಿಯು ಹಣವನ್ನು ಸ್ವೀಕರಿಸಿದ ಬಗ್ಗೆ ವಾದಿಯ ಹೆಸರಿನಲ್ಲಿ ಯಾವುದೇ ರಶೀದಿಗಳನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಂತರ ವಾದಿಯು ಮೇಲೆ ಹೇಳಿದ ಮೌಖಿಕ ಮಾತುಕತೆಯ ಪ್ರಕಾರ ಕರಾರು ಪತ್ರ ಬರೆದುಕೊಡಿ ಎಂದು ಪ್ರತಿವಾದಿಗೆ ವಿನಂತಿಸಿಕೊಂಡಾಗ ಪ್ರತಿವಾದಿಯು ಅವರ ಹೆಸರನಲ್ಲಿ ದಿನಾಂಕ 01-08-2017 ರಂದು ನಿಪಿ.1 ರಂತೆ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆ ದಿನ ಪ್ರತಿವಾದಿಯು ಕಾಟಪಾಡಿಗೆ ವಾಪಸ್ಸು ಹೋಗಲು ಅವಸರದಲ್ಲಿ ಇದ್ದ ಕಾರಣ ವಾದಿಯ ಹೆಸರಿಗೆ ನೇರವಾಗಿ ಶುದ್ಧ ಕ್ರಯ ಪತ್ರವನ್ನು ಬರೆದುಕೊಡುವ ಬದಲು ನಿಪಿ.1 ರಂತೆ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಾಖಲೆಯನ್ನು ಚಂದ್ರಶೇಖರ ಎಂಬುವರ ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ಅದೇ ಸರೀತಿ ದಾಖಲೆಗೆ ಪ್ರಕಾಶ ಮತ್ತು ರಾಮು ರವರು ಸಾಕ್ಷಿದಾರರು ಎಂದು ಸಹಿ ಹಾಕಿರುತ್ತಾರೆ ಎಂದರೆ ಸರಿಯಲ್ಲ ಮತ್ತು ಅವರು ಯಾರು ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ದಾಖಲೆಯನ್ನು ಪ್ರತಿವಾದಿಯು ವಾದಿಗೆ ನನ್ನ ಸಮಕ್ಷಮ ಎಂಪಿ ಹಳ್ಳಿ ಗ್ರಾಮದಲ್ಲಿ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ಸದರಿ ದಾಖಲೆಗೆ ಪ್ರತಿವಾದಿ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಾಖಲೆಯ ಕೆಳಭಾಗದಲ್ಲಿ P.Porkodi ಎಂದು ಇರುವ ಸಹಿಯು ಪ್ರತಿವಾದಿಯ ಸಹಿ ಆಗಿರುತ್ತದೆ ಎಂದರೆ ಸರಿಯಲ್ಲ. ಈಗ ನನಗೆ ತೋರಿಸಿದ ದಾಖಲೆಯು ಪ್ರತಿವಾದಿಯು ಈ ದಾವೆಯಲ್ಲಿ ದಾಖಲಿಸಿರುವ ವಕಾಲತ್ ಆಗಿದ್ದು ಅದರಲ್ಲಿ

ಪ್ರತಿವಾದಿಯ ಸಹಿ ಇರುತ್ತದೆ ಎಂದರೆ ಸರಿ. ಸದರಿ ವಕಾಲತ್ ಅನ್ನು ಈಗ ನಿಪಿ.17 ಮತ್ತು ಸಹಿಯನ್ನು ನಿಪಿ.17(ಎ) ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ನಿಪಿ.12 ದಾಖಲೆಯಲ್ಲಿ ಪ್ರತಿವಾದಿಯ ಸಹಿ ಇರುತ್ತದೆ ಎಂದರೆ ಸರಿ. ಸದರಿ ಸಹಿಯನ್ನು ನಿಪಿ.12(ಎ) ಎಂದು ಗುರುತಿಸಲಾಯಿತು.

11. ಪ್ರತಿವಾದಿಯು ವಾದಿಯ ಹೆಸರಿಗೆ ಮೇಲೆ ಹೇಳಿದಂತೆ ಕ್ರಯದ ಕರಾರು ಪತ್ರ ಬರೆದುಕೊಟ್ಟಿದ್ದರೂ ಸಹ ನನ್ನ ಮತ್ತು ವಾದಿಯ ಮಧ್ಯೆ ಸಂಬಂಧ ಕೆಟ್ಟಿರುವುದರಿಂದ ಪ್ರತಿವಾದಿಯು ಕರಾರು ಪತ್ರವನ್ನು ಬರೆದುಕೊಟ್ಟಿರುವುದಿಲ್ಲವೆಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.1 ರಲ್ಲಿರುವ ನನ್ನ ತಾಯಿಯ ಸಹಿಯು ನಿಪಿ.12 ಮತ್ತು 17 ದಾಖಲೆಯಲ್ಲಿರುವ ಸಹಿಗಳಿಗೆ ತಾಳೆ ಆಗುತ್ತದೆ ಎಂದರೆ ಸರಿಯಲ್ಲ. ನಿಪಿ.1 ರಲ್ಲಿರುವ ಸಹಿಯು ಪ್ರತಿವಾದಿಯ ಸಹಿ ಆಗಿದ್ದರೂ ಸಹ ಆಗಿರುವುದಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಕರಾರಿನ ಪ್ರಕಾರ ಪ್ರತಿವಾದಿಯ ವಾದಿಯ ಹೆಸರಿಗೆ ಕ್ರಯ ಪತ್ರವನ್ನು ಬರೆದುಕೊಡುವ ಬದಲು ದಾವಾ ಸ್ವತ್ತುಗಳ ಬೆಲೆ ಹೆಚ್ಚಾಗಿ ತೋರಿಸಿ ಪ್ರತಿವಾದಿಯ ಅಕ್ರಮ ಲಾಭ ಮಾಡಿಕೊಳ್ಳಲು ನಿಪಿ.5 ಮತ್ತು 6 ಕರಾರು ಪತ್ರಗಳನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಬೆಲೆಯು 2017 ರಲ್ಲಿ ಬೆಲೆಯು ರೂ.8 ಲಕ್ಷ ಇದ್ದರೂ ಸಹ ರೂ.32 ಲಕ್ಷ ಇತ್ತು ಎಂದು ನಾನು ದುರುದ್ದೇಶದಿಂದ ನನ್ನ ಮುಖ್ಯ ವಿಚಾರಣೆಯಲ್ಲಿ ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ವಾದಿಗೆ ಹಾನಿ ಉಂಟು ಮಾಡಲು ಮತ್ತು ತೊಂದರೆ ಕೊಡಲು ಪ್ರತಿವಾದಿಯು ಸುಳ್ಳು ಲಿಖಿತ ಹೇಳಿಕೆ ಸಲ್ಲಿಸಿದ್ದು ಆ ಮೇರೆಗೆ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕರಾರಿನ ಪ್ರಕಾರ ಪ್ರತಿವಾದಿಯು ವಾದಿಗೆ ಶುದ್ಧ ಕ್ರಯ ಪತ್ರ ಬರೆದುಕೊಡಲು ಭಾಧ್ಯ ಇರುತ್ತಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇರುವುದಿಲ್ಲ**.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/–

**(ಮುಜಫರ್)**

ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ,

ತರೀಕೆರೆ .